ದೇವದಾಸಿ ಆಯೋಗ ರಚಿಸುವ ಬಗ್ಗೆ

೧೦೦೪. ಶ್ರೀ ಸುಭಾಶ್ ಜೋಶಿ (ನಿಪ್ಪಾಣಿ).—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದೇವದಾಸಿಯರ ಬಗ್ಗೆ ವಿಚಾರಣಾ ಆಯೋಗವನ್ನು ರಚಿಸಲು ಸರ್ಕಾರ ಇಚ್ಛಿಸಿದೆಯೇ ?

ಆ) ಹಾಗಿದ್ದಲ್ಲಿ ಯಾವಾಗ ?

ಶ್ರೀ ಎಂ. ವೀರಪ್ಪ ಮೊಯಿಲಿ (ಸಮಾಜ ಕಲ್ಯಾಣ ಸಚಿವರ ಪರವಾಗಿ).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ನಿಪ್ಪಾಣಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯ

೧೨೭೮. ಶ್ರೀ ಸುಭಾಷ್ ಜೋಶಿ (ನಿಪ್ಪಾಣಿ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಿಪ್ಪಾಣಿ ನಗರಸಭೆಯು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ವಿದ್ಯಾರ್ಥಿ-ವಿದ್ಯಾರ್ಥಿನೀಯರಿಗಾಗಿ ನಿಪ್ಪಾಣಿ ನಗರದಲ್ಲಿ ಎರಡು ವಿದ್ಯಾರ್ಥಿನಿಲಯಂಗಳನ್ನು ಕಟ್ಟಿಸಿದೆಯೇ ?

ಆ) ಹಾಗಿದ್ದಲ್ಲಿ, ಈ ವಿದ್ಯಾರ್ಥಿನಿಲಯಗಳು ಕಳೆದ ಎರಡು ವರ್ಷಗಳಿಂದಲೂ ಏಕೆ ಪ್ರಾರಂಭವಾಗಿಲ್ಲ ?

ಇ) ಈ ವಿದ್ಯಾರ್ಥಿನಿಲಯಗಳು ಯಾವಾಗ ಪ್ರಾರಂಭವಾಗಂತ್ತದೆ ?

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ಹೌದು.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಅತೀ ಶೀಘ್ರವಾಗಿ.

ರಾಜ್ಯದಲ್ಲಿ ಮದ್ಯಸಾರದ ಉತ್ಪಾದನೆ ಮತ್ತು ಹಂಚಿಕೆ

೧೧೬೨. ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ).—ಮಾನ್ಯ ಆರ್ಥಿಕ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ೫ ವರ್ಷಗಳಿಂದ ರಾಜ್ಯದಲ್ಲಿ ಉತ್ಪಾದಿಸಲ್ಪಟ್ಟ ಮದ್ಯಸಾರದ ಉತ್ಪಾದನೆ ಎಷ್ಟು ? (ವರ್ಷವಾರು ಮಾಹಿತಿ ನೀಡುವುದು)

ಆ) ಕಳೆದ ಮೂರು ವರ್ಷಗಳಲ್ಲಿ ಹಂಚಿಕೆ ಮಾಡಲಾದ ವಿಧಾನ ಮಂತ್ತು ಎಷ್ಟು ಮದ್ಯಸಾರವನ್ನು ಹಂಚಿಕೆ ಮಾಡಲಾಗಿದೆ (ವರ್ಷವಾರು ಮಾಹಿತಿ ನೀಡುವುದು).

ಇ) ಹಂಚಿಕೆ ಮಾಡಲಾಗಿರುವ ಮದ್ಯಸಾರವನ್ನು ಸರಿಯಾಗಿ ಉಪಯೋಗ ಮಾಡಲಾಗಿದೆಯೆ ಅಥವಾ ಇಲ್ಲವೇ ಎಂಬುದನ್ನು ಸರ್ಕಾರವು ಪರಿಶೀಲಿಸಿದೆಯೇ ?

ಈ) ಹಂಚಿಕೆ ಮಾಡಲಾಗಿರುವ ಮದ್ಯಸಾರವನ್ನು ದುರುಪಯೋಗ ಮಾಡಿರುವ ಮತ್ತು ಮದ್ಯಸಾರವನ್ನು ಸರಿಯಾಗಿ ಉಪಯೋಗ ಮಾಡದೆ ಲಾಭಕ್ಕೆ ಮಾರಿಕೊಳ್ಳುವುದರ ಬಗ್ಗೆ ಸರ್ಕಾರ ಯವರ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ ದುರುಪಯೋಗ ಮಾಡಿಕೊಳ್ಳುವುದರ ವಿರುದ್ಧ ಕ್ರಮ ಜರುಗಿಸಲಾಗಿದೆಯೇ ?